# ಅವಿಸ್ಮರಣೀಯ ಅಮರನಾಥ ಯಾತ್ರೆ

ಕೆ. ಲೀಲಾವತಿ

ಕಾಶ್ಮೀರದ ಹಿಮಶಿಖರಗಳ ಮಧ್ಯೆ ನೆಲೆಸಿರುವ ಅವರನಾಥನ ದರ್ಶನ ಎಲ್ಲ ಆಸ್ತಿಕ ಭಾರತೀಯನ ಕನಸು. ಹಲವಾರು ಅನುಕೂಲತೆಗಳನ್ನು ಹಾಗೂ ವ್ಯವಸ್ಥೆಗಳನ್ನು ಸರ್ಕಾರ, ಇತರ ಸಂಘಸಂಸ್ಥೆಗಳು ಮಾಡುವುದಿದ್ದರೂ, ನೈಸರ್ಗಿಕ ವೈಪರೀತ್ಯಗಳಿಂದ ಕೂಡಿದ ಆ ಭೂಪ್ರದೇಶದ ಯಾತ್ರೆ ಅತ್ಯಂತ ಅನಿಶ್ಚಿತವಾಗಿರುತ್ತದೆ. ಅಮರನಾಥ ಯಾತ್ರೆಯ ಈ ಅನುಭವ ಲೇಖನದಲ್ಲಿ ಕೆಲವು ಮಾಹಿತಿಗಳನ್ನೂ ಯಾತ್ರೆಯ ಸಿದ್ಧತೆ, ದೈಹಿಕ-ಮಾನಸಿಕ ತಯಾರಿ ಮುಂತಾದ ವಿವರಗಳನ್ನೂ ನೀಡಲಾಗಿದೆ. ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಹಲವು ಪತ್ರಿಕೆಗಳಲ್ಲಿ ಅವರ ಅನೇಕ ಲೇಖನಗಳು ಪ್ರಕಟವಾಗಿವೆ.

ನನ್ನ ಶಾಲಾ ಪಠ್ಯಪುಸ್ತಕಗಳಲ್ಲಿ ಭಾರತದ ಉತ್ತರದಲ್ಲಿ ಅತಿ ಎತ್ತರವಾದ ಹಿಮಾಚ್ಛಾದಿತ ಪರ್ವತವಿದೆ, ಅದನ್ನು ಹಿಮಾಲಯ ಎಂದು ಕರೆಯುತ್ತಾರೆ - ಎಂದು ಓದುವಾಗೆಲ್ಲಾ ಹಿಮಾಲಯ ಅಂದರೆ ಏನೋ ಅದ್ಭುತ ಅನ್ನಿಸುತಿತ್ತು. ಆ ಮುಗ್ಧ ವಯಸ್ಸಿನಲ್ಲಿ ಹಿಮಾಲಯವನ್ನು ನನ್ನದೇ ಆದ ಕಲ್ಪನೆಯಲ್ಲಿ ಚಿತ್ರಿಸಿಕೊಳ್ಳುತ್ತಿದ್ದೆ. ಹಿಮಾಲಯ ಅಂದರೆ ಹಿಮಗಿರಿಗಳು, ಹಿಮದ ನಿವಾಸ ಅಷ್ಟೇ ಅಲ್ಲ, ನಮ್ಮ ಧಾರ್ಮಿಕ ನಂಬಿಕೆ, ಆಧ್ಯಾತ್ಮಿಕತೆ, ಯೋಗಜ್ಞಾನಗಳ ಭದ್ರ ನೆಲೆ. ಅದೊಂದು ತಪೋಭೂಮಿ, ಆಧ್ಯಾತ್ಮಿಕ ತಾಣ. ಅಲ್ಲಿ ಋಷಿ ಮುನಿಗಳು ಇರುತ್ತಾರೆ. ಪರಶಿವನ ಆವಾಸ ಸ್ಥಾನ. ಸ್ವರ್ಗವೇ ಸ್ವರ್ಗ ಅನ್ನಿಸುತಿತ್ತು. ಶುಭ್ರ ಹಿಮದಿಂದ ಕೂಡಿದ ಭವ್ಯ ದಿವ್ಯ ಜೀವಂತ ಪರ್ವತ ಕಣ್ಣೆದುರು ಬಂದು ಭಕ್ತಿ-ಭಾವದಿಂದ ಮನದಲ್ಲೇ ತಲೆ ಬಾಗುತ್ತಿದ್ದೆ. ಆಗೆಲ್ಲಾ ಈಗಿನಂತೆ ಫೋಟೋಗಳಾಗಲಿ ವೀಡಿಯೋಗಳಾಗಲಿ ಇರಲಿಲ್ಲ. ಸಾಧ್ಯವಾದರೆ ನನ್ನ ಜೀವಿತದಲ್ಲೊಮ್ಮೆ ಅದನ್ನು ನೋಡಲೇಬೇಕೆಂದು ಕನಸುತ್ತಿದ್ದೆ.

ಸ್ವಾಮಿ ರಾಮ ಅವರ 'ಹಿಮಾಲಯ ಮಹಾತ್ಮರ ಸನ್ನಿಧಿಯಲ್ಲಿ' ಪುಸ್ತಕ ಓದಿದ ನಂತರವಂತೂ ಹಿಮಾಲಯ ನೋಡಬೇಕೆನ್ನುವ ಹುಚ್ಚು ಹೆಚ್ಚಾಯಿತು. ಆದರೆ ಹೇಗೆ ಏನು ಅಂತ ಗೊತ್ತಾಗಿರಲಿಲ್ಲ. ಏಷ್ಯನ್ ಟ್ರಾವೆಲ್ಸ್‌ನವರು ಅಮರನಾಥ ಯಾತ್ರೆಗೆ ಕರೆದುಕೊಂಡು ಹೋಗುತ್ತಾರೆ ಅಂತ ತಿಳಿದ ಕೂಡಲೆ ನಾನು, ನನ್ನ ಸ್ನೇಹಿತೆಯರು ಹೋಗಲು ನಿರ್ಧರಿಸಿಬಿಟ್ಟೆವು. ಹಿಮಾಲಯ ಅಂತ ಕೇಳಿದ ಕೂಡಲೇ ಅದನ್ನು ನೋಡುವ ಸೌಭಾಗ್ಯಕ್ಕಾಗಿ ಕನಸು ಕಾಣುತ್ತಿದ್ದ ನನಗೆ, ಅದು ನನಸಾಗಿದ್ದು ನನ್ನ ಪುಣ್ಯ ವಿಶೇಷವೇ ಸರಿ.

ಅಮರನಾಥ ಯಾತ್ರೆ ಅನ್ನುವುದು ಪ್ರತಿಯೊಬ್ಬ ಹಿಂದುವಿನ ಕನಸು. ಅಲ್ಲಿಗೆ ಹೋಗಬೇಕಾದರೆ ಮೊದಲು Amarnath Shrine Board ನವರಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕಿತ್ತು. ಅವರು ಯಾವ ದಿನ ಎಷ್ಟು ಜನರು Base Camp ಬಾಲ್‌ತಾಲ್‌ನಿಂದ ಅಮರನಾಥನ ದರ್ಶನಕ್ಕೆ ಹೊರಡಬೇಕೆಂದು ನಿರ್ಧರಿಸುತ್ತಾರೆ. ಇದಕ್ಕಾಗಿ ನಿಗದಿತ ನಮೂನೆಯ ಅರ್ಜಿ ಇರುತ್ತದೆ. ಅದನ್ನು ತುಂಬಿಸಿ ಅಗತ್ಯ ದಾಖಲೆಗಳನ್ನು ಲಗತ್ತಿಸಬೇಕು. ಇದರಲ್ಲಿ ನಾವು ಅಮರನಾಥ ಯಾತ್ರೆ ಮಾಡಲು ದೈಹಿಕವಾಗಿ ಸಮರ್ಥರು ಎನ್ನುವ ವೈದ್ಯಕೀಯ ಪ್ರಮಾಣಪತ್ರವನ್ನೂ ಲಗತ್ತಿಸಬೇಕು. ಈ ಪ್ರಮಾಣ ಪತ್ರವನ್ನು ಸರ್ಕಾರಿ ವೈದ್ಯರಿಂದಲೇ ಮಾಡಿಸಿರಬೇಕು. ನಾವು ಏಷ್ಯನ್ ಟ್ರಾವೆಲ್ಸ್‌ನವರಿಗೆ ಹಣ ಕಟ್ಟಿ ಅಮರನಾಥನ ಯಾತ್ರೆಗೆ ಬೇಕಾದ ನಮ್ಮ ಎಲ್ಲಾ ದಾಖಲೆಗಳನ್ನು ಕೊಟ್ಟರೆ ಅವರೇ ನಮ್ಮ ಪರವಾಗಿ Amarnath Shrine Board ನವರಿಂದ ಅಪ್ಪಣೆ ಪಡೆದುಕೊಳ್ಳುತ್ತಾರೆ.

ಅಮರನಾಥ ಯಾತ್ರೆಯ ತಯಾರಿ ಪ್ರಾರಂಭವಾಯಿತು. ಚಳಿಗೆ ಬೇಕಾದ ಬೆಚ್ಚನೆಯ ಉಡುಪುಗಳು, ಹಿಮದ ಮೇಲೆ ನಡೆಯಲೆಂದೇ ವಿಶೇಷ ಬೂಟು, ಮಳೆ ಬಂದರೆ ಅಗತ್ಯ ಬೇಕಾಗುವ ರೈನ್‌ಕೋಟ್ ಇತ್ಯಾದಿ ಪ್ರವಾಸಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ಸಂಭ್ರಮದಿಂದ ಖರೀದಿಸಿದೆವು.

## ಅಮರನಾಥ ಗುಹೆಯ ಬಗ್ಗೆ

ಅಮರನಾಥ ಗುಹೆಯು ಶಿವ ಮಹಾದೇವನು ಪಾರ್ವತಿಗೆ ಅಮರತ್ವವನ್ನು ಬೋಧಿಸಿದ ಜಾಗ. ಈ ಗುಹೆಯಲ್ಲಿ ವರ್ಷದ ಮೂರು-ನಾಲ್ಕು ತಿಂಗಳುಗಳ ಕಾಲ ಹಿಮವು ಲಿಂಗದ ಆಕೃತಿಯಲ್ಲಿ ನೈಸರ್ಗಿಕವಾಗಿ ರೂಪುಗೊಳ್ಳುತ್ತದೆ. ಸಾಮಾನ್ಯವಾಗಿ ಪ್ರತಿ ವರ್ಷ ಜೂನ್ ತಿಂಗಳಿನಿಂದ ಸೆಪ್ಟಂಬರ್‌ವರೆಗೆ ಈ ದೇವಾಲಯವು ತೆರೆದಿರುತ್ತದೆ.

ಅಮರನಾಥ ಗುಹೆಯು ೧೩,೦೦೦ ಅಡಿಗಳಷ್ಟು ಎತ್ತರದಲ್ಲಿದೆ. ಗುಹೆ ಐವತ್ತು ಅಡಿ ಎತ್ತರ, ಐವತ್ತೈದು ಅಡಿ ಅಗಲವಿದೆ. ಒಳಗೆ ಸುಮಾರು ಐವತ್ತು ಅಡಿಗಳಷ್ಟು ಉದ್ದವಿದೆ. ಹೊರಗಡೆ ಅದರ ಪಕ್ಕದಲ್ಲಿಯೇ ಒಂದು ಹಿಮದ ಝರಿ ಹರಿದುಬರುತ್ತಿರುತ್ತದೆ. ಅದನ್ನು ಅಮರಗಂಗಾ ಎನ್ನುವರು. ಗುಹೆಯ ಒಂದು ಮೂಲೆಯಲ್ಲಿ ಹಿಮದಿಂದ ಮೂಡಿದ ಶಿವಲಿಂಗವಿದೆ. ಇದನ್ನೇ ಅಮರನಾಥ ಶಿವ ಎನ್ನುವರು. ಇದು ಪ್ರಕೃತಿ ನಿರ್ಮಿತ ದೇವಾಲಯ. ಇದನ್ನು ಯಾರೂ ಕೊರೆದಿಲ್ಲ. ಮನುಷ್ಯನ ಯಾವ ಸುತ್ತಿಗೆಯ ಪೆಟ್ಟೂ ಇದಕ್ಕೆ ಬಿದ್ದಿಲ್ಲ. ಇಲ್ಲಿ ಶಿವಭಾವ ಓತಪ್ರೋತವಾಗಿರುತ್ತದೆ.

## ಎರಡು ಪಾರಿವಾಳಗಳ ಕಥೆ

ಒಮ್ಮೆ ಮಾತೆ ಪಾರ್ವತಿಯು ಶಿವನಲ್ಲಿ ಅಮರತ್ವದ ರಹಸ್ಯವನ್ನು ಕೇಳುತ್ತಾಳೆ. ಆಗ ಶಿವನು ಈ ರಹಸ್ಯವನ್ನು ಪಾರ್ವತಿಯ

ಹೊರತಾಗಿ ಬೇರೆ ಯಾರೂ ಕೇಳಿಸಿಕೊಳ್ಳಬಾರದೆಂದು ಒಂದು ಅಜ್ಞಾತ ಗುಹೆಯನ್ನು ಆರಿಸಿಕೊಳ್ಳುತ್ತಾನೆ. ಅದೇ ಅಮರನಾಥ ಗುಹೆ. ಅಮರನಾಥಕ್ಕೆ ಬರುವ ಮೊದಲು ಶಿವನು ತನ್ನ ವಾಹನ ನಂದಿಯನ್ನು ಪಹಲ್ಗಾಂನಲ್ಲಿಯೂ, ತಲೆಯ ಮೇಲೆ ಇದ್ದ ಚಂದ್ರನನ್ನು ಚಂದನ್‌ವಾರಿಯಲ್ಲಿಯೂ, ಕೊರಳಲ್ಲಿದ್ದ ನಾಗನನ್ನು ಶೇಷನಾಗದಲ್ಲಿಯೂ, ಪಂಚಭೂತಗಳನ್ನು ಪಂಚತರಣಿಯಲ್ಲಿಯೂ ಬಿಟ್ಟು ಪಾರ್ವತಿಯೊಡನೆ ಮಾತ್ರ ಈ ಗುಹೆಯನ್ನು ಪ್ರವೇಶಿಸುತ್ತಾನೆ.

ಅಲ್ಲಿ ಅನೇಕ ಜೀವಿಗಳು ಇದ್ದವು. ಆಗ ಗುಹೆಯಲ್ಲಿರುವ ಜೀವಿಗಳನ್ನು ನೋಡಿ ಕಾಲಾಗ್ನಿಯನ್ನು ಕರೆದು ಆ ಜೀವಿಗಳನ್ನೆಲ್ಲಾ ನಾಶ ಮಾಡುವಂತೆ ಹೇಳುತ್ತಾನೆ. ಕಾಲಾಗ್ನಿಯು ಶಿವನ ಆದೇಶದ ಮೇರೆಗೆ ಗುಹೆಯಲ್ಲಿದ್ದ ಜೀವಿಗಳನ್ನು ನಾಶಮಾಡುತ್ತಾನೆ. ಆದರೆ ಆ ಗುಹೆಯಲ್ಲಿ ಪಾರಿವಾಳದ ಎರಡು ಮೊಟ್ಟೆಗಳನ್ನು ನೋಡುತ್ತಾನೆ. ಮೊಟ್ಟೆಗಳು ಜೀವವಿರುವ ಜೀವಿಯಲ್ಲ ಎಂದು ತಿಳಿದು ಅಗ್ನಿಯು ಅವುಗಳನ್ನು ನಾಶ ಮಾಡದೇ ಹಾಗೇ ಬಿಟ್ಟು ಬಿಡುತ್ತಾನೆ. ನಂತರ ಶಿವನು ಪಾರ್ವತಿಗೆ ಅಮರತ್ವದ ರಹಸ್ಯವನ್ನು ಬೋಧಿಸುತ್ತಾನೆ. ಶಿವನು ಗುಹೆಯಲ್ಲಿ ಪಾರ್ವತಿಗೆ ಅಮರತ್ವದ ಕಥೆಯನ್ನು ಹೇಳುವ ಸಂದರ್ಭದಲ್ಲಿ ಪಾರಿವಾಳದ ಮೊಟ್ಟೆಯಿಂದ ಎರಡು ಪಾರಿವಾಳದ ಮರಿಗಳು ಹೊರಬಂದು ಶಿವನು ಹೇಳುತ್ತಿದ್ದ ಅಮರತ್ವದ ಕಥೆಗಳನ್ನು ಕೇಳಿಸಿಕೊಳ್ಳುತ್ತವೆ. ಆದ್ದರಿಂದ ಅಮರನಾಥದ ಗುಹೆಯಲ್ಲಿ ಶಿವ ಮತ್ತು ಪಾರ್ವತಿಗಿರುವಷ್ಟೇ ಮಹತ್ವ ಈ ಜೋಡಿ ಪಾರಿವಾಳಕ್ಕೂ ಕೂಡ ದೊರೆಯುತ್ತದೆ.

ಶಿವನ ಬಾಯಿಯಿಂದ ಅಮರತ್ವದ ಕಥೆಯನ್ನು ಕೇಳಿದ ನಂತರ ಆ ಜೋಡಿ ಪಾರಿವಾಳಗಳು ಕೂಡ ಅಮರತ್ವವನ್ನು ಪಡೆಯಿತೆಂದು ಹೇಳಲಾಗಿದೆ. ಇದೇ ಕಾರಣದಿಂದ ಇಂದಿಗೂ ಕೂಡ ಅಮರನಾಥ ಗುಹೆಯಲ್ಲಿ ಜೋಡಿ ಪಾರಿವಾಳಗಳು ಅಮರವಾಗಿವೆ. ಈ ಗುಹೆಯಲ್ಲಿ ಈ ಜೋಡಿ ಪಾರಿವಾಳಗಳನ್ನು ನೋಡಿದವರು ಮೋಕ್ಷವನ್ನು ಪಡೆಯುತ್ತಾರೆಂಬ ನಂಬಿಕೆಯಿದೆ.

ಗುಹೆಯ ಸುತ್ತಮುತ್ತ ಪಾರಿವಾಳಗಳಿಗೆ ಆಹಾರ ನೀಡಬಲ್ಲ ಯಾವುದೇ ಮೂಲಗಳಿಲ್ಲ. ಅಲ್ಲದೆ ಇಲ್ಲಿ ಚಳಿಗಾಲದಲ್ಲಿ ತೀವ್ರ ಚಳಿ ಇರುವುದರಿಂದ ಇಷ್ಟು ಚಳಿಯಲ್ಲಿ ಪಾರಿವಾಳಗಳು ಹೇಗೆ ಜೀವಿಸುತ್ತವೆಯೆಂಬುದೇ ಆಶ್ಚರ್ಯ ಅನ್ನಿಸುತ್ತದೆ.

### ಸ್ವಾಮಿ ವಿವೇಕಾನಂದರ ಅಮರನಾಥ ಯಾತ್ರೆ

ಸ್ವಾಮಿ ವಿವೇಕಾನಂದರು ೧೮೯೮ರ ಜುಲೈ-ಆಗಸ್ಟ್ ತಿಂಗಳಲ್ಲಿ ಅಮರನಾಥ ಯಾತ್ರೆಯನ್ನು ಕಾಲುನಡಿಗೆಯಲ್ಲೇ ಕೈಗೊಂಡಿದ್ದರು. ಆಗ ಒಂದು ಹೊತ್ತು ಮಾತ್ರ ಊಟ ಮಾಡುತ್ತಿದ್ದರು. ತುಂಬಾ ಅಂತರ್ಮುಖಿಗಳಾಗಿದ್ದು, ಸಾಧು, ಸಂನ್ಯಾಸಿಗಳಲ್ಲದೆ ಬೇರೆ ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ಅವರಲ್ಲಿ ಶಿವಭಾವವೇ ತುಂಬಿತ್ತು. ಅಮರನಾಥ ಗುಹೆ ಸಿಕ್ಕಾಗ ಅವರ ಮುಖಮಂಡಲವು ಭಕ್ತಿ-ಭಾವದಿಂದ ಪ್ರಜ್ವಲಿಸುತ್ತಿತ್ತು. ಕೇವಲ ಕೌಪೀನ ಧಾರಿಗಳಾಗಿ ಗುಹೆಯನ್ನು ಪ್ರವೇಶಿಸಿದರು. ಮೈಗೆಲ್ಲಾ ವಿಭೂತಿ ಬಳಿದುಕೊಂಡು ತುಂಬಾ ಭಕ್ತಿ ಪರವಶರಾಗಿ ಶಿವನನ್ನು ಸ್ತುತಿಸಿದರು.

''ನೂರಾರು ಕಂಠಗಳಿಂದ ಹೊಮ್ಮಿದ ಜೈಕಾರದಿಂದ ಅಮರನಾಥನ ಗುಹೆ ಮಾರ್ದನಿಗೊಳ್ಳುತ್ತಿತ್ತು. ಉದ್ವೇಗದ ಭರದಲ್ಲಿ ಅವರು ಬಾಹ್ಯ ಪ್ರಜ್ಞೆಯನ್ನೇ ಕಳೆದುಕೊಂಡರು. ಆ ಸ್ಥಿತಿಯಲ್ಲಿ ಅವರಿಗೊಂದು ಪರಮಾದ್ಭುತ ಅಲೌಕಿಕ ಅನುಭವವಾಯಿತು. ಆದರೆ ಅವರು ಆ ವಿಷಯವಾಗಿ ಯಾರಿಗೂ ಏನೂ ಹೇಳಲಿಲ್ಲ. ತುಂಬಾ ಒತ್ತಾಯಿಸಿ ಕೇಳಿದಾಗ ನನಗೆ ಅಮರನಾಥನ ಸಾಕ್ಷಾತ್ ದರ್ಶನವಾಯಿತು. ಅವನು ನನಗೆ ಇಚ್ಛಾಮರಣದ ವರದಾನ ನೀಡಿದ ಎಂದಷ್ಟೇ ಹೇಳಿದರು. ಒಂದಂತೂ ನಿಜ, ಅವರು ಗುಹೆಯನ್ನು ಪ್ರವೇಶಿಸಿದೊಡನೆಯೆ ಅವರು ಭೇಟಿಯಾಗಿದ್ದು ಸಾಕ್ಷಾತ್ ಪರಮೇಶ್ವರನನ್ನೇ! ಆಗ ಅವರ ತನು ಮನವೆಲ್ಲವೂ ಶಿವಮಯವಾಗಿದ್ದಿತು.'' *(ನಿವೇದಿತಾ, 'ನಾ ಕಂಡಂತೆ ನನ್ನ ಗುರುದೇವ')*

### ನನ್ನ ಅಮರನಾಥ ಯಾತ್ರೆ

ಏಷ್ಯನ್ ಟ್ರಾವೆಲ್ಸ್‌ನವರ ೨೫.೦೬.೨೦೧೬ರಿಂದ ಪ್ರಾರಂಭವಾದ ೧೮ ದಿನಗಳ ಪ್ರವಾಸದಲ್ಲಿ ಅಮೃತಸರ, ವೈಷ್ಣೋದೇವಿ ಮತ್ತು ಇನ್ನಿತರ ಸ್ಥಳಗಳ ಭೇಟಿಯ ನಂತರ ೦೨.೦೭.೨೦೧೬ರಂದು ಅಮರನಾಥನ ದರ್ಶನಕ್ಕಾಗಿ ಬೇಸ್‌ಕ್ಯಾಂಪ್ ಬಾಲ್ ತಾಲ್ ಕಡೆಗೆ ಹೊರಟೆವು. ಹೋಗುವ ದಾರಿಯಲ್ಲಿ ಅಲ್ಲಲ್ಲಿ ಅಮರನಾಥ ಯಾತ್ರಾರ್ಥಿಗಳಿಗೆ ಸುಸ್ವಾಗತ ಅನ್ನುವ ಫಲಕಗಳ ಕಂಡಾಗಲಂತೂ ನನಗೆ ಅದೇನೋ ಪುಳಕವಾಗುತಿತ್ತು. ಆ ದಿನ ಸಂಜೆ ಸುಮಾರು ಐದು ಗಂಟೆಯ ಹೊತ್ತಿಗೆ ಬಾಲ್‌ತಾಲ್ ತಲುಪಿದೆವು. ಇಡೀ ವಾತಾವರಣ ತುಂಬಾ ಚಟುವಟಿಕೆಯಿಂದ ಕೂಡಿತ್ತು. ಅಲ್ಲಲ್ಲಿ ಟೆಂಟ್‌ಗಳಿದ್ದವು. ನಮ್ಮಂತಹ ಯಾತ್ರಾರ್ಥಿಗಳು ಆ ಟೆಂಟ್‌ಗಳಲ್ಲಿ ತಂಗಿದ್ದರು. ನಮಗೂ ಒಂದು ಟೆಂಟ್ ಸಿಕ್ಕಿ ಅಲ್ಲೇ ತಂಗಿದೆವು. ಚಳಿಯೋ ಚಳಿ! ಸಾಕಷ್ಟು ಬೆಚ್ಚಗಿನ ಬಟ್ಟೆಗಳನ್ನು ಕೊಂಡು ಒಯ್ದಿದ್ದರಿಂದ ಒಂದರ ಮೇಲೊಂದು ಧರಿಸಿಕೊಂಡೆವು. ಅಲ್ಲಿನ ವಿಶೇಷವೆಂದರೆ ಲಂಗರ್‌ಗಳು. ಅಂದರೆ ಬೇರೆ ಬೇರೆ ರಾಜ್ಯಗಳ ಸಂಘ, ಸಂಸ್ಥೆಗಳವರು ಹೋಟಲ್ಲುಗಳಂತೆ ಭೋಜನಾಲಯಗಳನ್ನು ತೆರೆದಿರುತ್ತಾರೆ. ಅಲ್ಲಿ ಸಂಪೂರ್ಣ ಉಚಿತ. ಏನನ್ನು ಬೇಕಾದರೂ ಎಷ್ಟು ಬೇಕಾದರೂ ತಿನ್ನಬಹುದು. ನಲ್ಲಿ ಅಳವಡಿಸಿರುವ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಕಾಫಿ ಮತ್ತು ಟೀಗಳನ್ನು ತುಂಬಿಸಿಟ್ಟಿರುತ್ತಾರೆ. ನಾವೇ ಲೋಟಗಳಲ್ಲಿ ಅದನ್ನು ತುಂಬಿಸಿಕೊಂಡು ಕುಡಿಯಬಹುದಿತ್ತು. ಎಲ್ಲಾ ಲಂಗರ್‌ಗಳವರು 'ನಮ್ಮಲ್ಲಿಗೇ ಬನ್ನಿ' ಎಂದು ತುಂಬಾ ಆತ್ಮೀಯತೆಯಿಂದ ಸ್ವಾಗತಿಸುತ್ತಾರೆ. ನಾನು ಆಂಧ್ರಪ್ರದೇಶದವರ ಲಂಗರಿಗೆ ಹೋಗಿ ಪಾನಿಪೂರಿ ಮತ್ತು ಇಡ್ಲಿ ತಿಂದೆ. ಅಷ್ಟು ಎತ್ತರದ ಪ್ರದೇಶದಲ್ಲಿ ಅಷ್ಟೊಂದು ಬಗೆಯ ತಿನಿಸುಗಳು ಉಚಿತವಾಗಿ ಸಿಗುತ್ತಿದ್ದುದು ನನಗೆ ಆಶ್ಚರ್ಯ ಮತ್ತು ಸಂತೋಷವನ್ನುಂಟುಮಾಡಿತ್ತು. ಅಮರನಾಥ ಯಾತ್ರಾರ್ಥಿಗಳಿಗೆ ಸೇವೆ ಮಾಡಬೇಕೆನ್ನುವ ಅವರ ಉದ್ದೇಶಕ್ಕೆ, ಸೇವಾಭಾವಕ್ಕೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು.

ಅಮರನಾಥ ಯಾತ್ರೆಯೊಂದು ಐದು ದಿನಗಳ ದೀರ್ಘ ಚಾರಣ. ನಡೆದು ಹೋಗಬಹುದು, ಕುದುರೆ ಅಥವಾ ಪಾಲ್‌ಕಿಗಳಲ್ಲಿಯೂ ಹೋಗಬಹುದು. ಹೆಲಿಕಾಪ್ಟರ್‌ನಲ್ಲಿಯೂ ಹೋಗಬಹುದು. ಅಲ್ಲಿಗೆ ಬಾಲ್‌ತಾಲ್ ಕಡೆಯಿಂದಾಗಲೀ ಅಥವಾ ಪಹಲ್ಗಾಮ್ ಕಡೆಯಿಂದಾಗಲೀ ಹೋಗಬಹುದು. ಶಿವ ಹೋಗಿದ್ದು ಪಹಲ್ಗಾಮ್ ಕಡೆಯಿಂದಲೇ. ಇಲ್ಲಿಂದ ಹೋಗುವವರಿಗೆ ದಾರಿಯಲ್ಲಿ ಚಂದನ್‌ವಾರಿ, ಶೇಷನಾಗ ಮತ್ತು ಪಂಚತರಣಿಗಳು ಸಿಗುತ್ತದಂತೆ.

ನಾವು ಟ್ರಾವೆಲ್ಸ್ ಕಡೆಯಿಂದ ಹೋಗಿದ್ದರಿಂದ ಒಂದೇ ದಿನದಲ್ಲಿ ಅಮರನಾಥನ ದರ್ಶನ ಮಾಡಿ ವಾಪಸ್ಸು ಬರಬೇಕಿತ್ತು. ಆದ್ದರಿಂದ ನಮಗೆ ಕುದುರೆ ಅಥವಾ ಪಾಲ್‌ಕಿಗಳಲ್ಲಿಯೇ ಹೋಗುವುದು ಅನಿವಾರ್ಯವಾಗಿತ್ತು. ಆ ದಿನ ಸಂಜೆಯೇ ನಾವು ಅಮರನಾಥನ ದರ್ಶನಕ್ಕೆ ಹೇಗೆ ಹೋಗುತ್ತೇವೆಂದು ತಿಳಿಸಿದರೆ, ಮರುದಿನಕ್ಕೆ ಅದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತಾರೆ. ಅದಕ್ಕಾಗಿಯೆ ಅಲ್ಲಿ ಏಜೆಂಟರುಗಳಿದ್ದಾರೆ. ನಿಗದಿತ ಹಣ ಪಾವತಿಸಿದರೆ ಸೂಕ್ತ ವ್ಯವಸ್ಥೆ ಮಾಡುತ್ತಾರೆ. ನಾವು ಕುದುರೆಯ ಮೇಲೆ ಅಥವಾ ಪಾಲ್ಕಿಯಲ್ಲಿ ಹೋಗಬೇಕಾಗಿತ್ತು. ಅಂದೇ ಅಮರನಾಥನ ದರ್ಶನ ಮುಗಿಸಿ ಸಂಜೆಯೇ ನಮ್ಮ ಟೆಂಟ್ ಬಳಿ ಹಿಂತಿರುಗಬೇಕಾಗಿದ್ದರಿಂದ ನಮಗೆ ನಡೆದುಕೊಂಡು ಹೋಗಲು ಅವಕಾಶವಿರಲಿಲ್ಲ. ನಾನು ಆರಿಸಿಕೊಂಡದ್ದು ಪಾಲ್‌ಕಿಯನ್ನು.

ಮರುದಿನ ಬೆಳಗ್ಗೆ ನಾಲ್ಕು ಗಂಟೆಗೇ ಹೊರಡುವುದೆಂದು ನಿಶ್ಚಯವಾಯಿತು. ಮೂರು ಗಂಟೆಗೆ ಎಚ್ಚರವಾದಾಗ ಚಳಿಗೆ ಕೈ ಬೆರಳುಗಳೆಲ್ಲಾ ಗಟ್ಟಿಯಾಗಿ ಅಂಟಿಕೊಂಡಿದ್ದು ಚಲನೆಯೇ ಇಲ್ಲದಂತೆ ಆಗಿತ್ತು. ಹಾಗೇ ಸ್ವಲ್ಪ ಸ್ವಲ್ಪ ಬಿಸಿ ಮಾಡಿಕೊಂಡು ಹೇಗೋ ಸರಿ ಮಾಡಿಕೊಂಡೆ. ಅಲ್ಲಿ ಹಣ ಕೊಟ್ಟರೆ ಬಿಸಿನೀರು ಸಿಗುವ ವ್ಯವಸ್ಥೆ ಇತ್ತು. ಬಿಸಿನೀರಿನಲ್ಲಿ ಸ್ನಾನ ಮಾಡಿ ಮತ್ತೆ ಎಲ್ಲಾ ಬೆಚ್ಚನೆಯ ಬಟ್ಟೆಗಳನ್ನು ಧರಿಸಿ ಅಮರನಾಥನ ದರ್ಶನಕ್ಕೆ ಹೊರಡಲು ಸಿದ್ಧರಾದೆವು. ನಮ್ಮನ್ನು ಕರೆದೊಯ್ಯಲು ನಾಲ್ಕು ಜನ ಡೋಲಿಯೊಂದಿಗೆ ಬಂದರು. 'ಡೋಲಿ' ಅಂದರೆ ಎರಡು ಬೊಂಬುಗಳ ನಡುವೆ ಒಂದು ಕುರ್ಚಿಯನ್ನು ಕಟ್ಟಿರುತ್ತಾರೆ. ಅದನ್ನು ನೋಡಿ ಆರಾಮಾಗಿ ಕುರ್ಚಿಯಲ್ಲಿ ಕುಳಿತು ಹೋಗಬಹುದೆಂದು ಭಾವಿಸಿದ್ದೆ. ಆದರೆ ಹಾಗಾಗಲಿಲ್ಲ. ನಮ್ಮ ಹೆಸರಿನೊಂದಿಗೆ ನಮ್ಮನ್ನು ಕರೆದೊಯ್ಯುವವರ ಹೆಸರುಗಳನ್ನೂ ದಾಖಲಿಸಿಕೊಂಡು, ನಮ್ಮ ಕುತ್ತಿಗೆಗೆ ಒಂದು ಗುರುತಿನ ಚೀಟಿಯನ್ನು ಹಾಕಿ ಕಳುಹಿಸುತ್ತಾರೆ. ನಾನು ನನ್ನ ಅನುಮತಿ ಪತ್ರದೊಂದಿಗೆ ಆ ನಾಲ್ಕು ಜನರೊಂದಿಗೆ ಹೊರಟೆ. ಹೋಗುವಾಗ ನನಗೂ ನನ್ನ ಇತರ ಪ್ರವಾಸಿ ಮಿತ್ರರಿಗೂ ಸಂಬಂಧವಿರುವುದಿಲ್ಲ. ನಾನು ಮತ್ತು ನನ್ನೊಂದಿಗೆ ನನ್ನನ್ನು ಡೋಲಿಯಲ್ಲಿ ಕರೆದೊಯ್ಯುವ ಜನ ಅಷ್ಟೇ ಇದ್ದದ್ದು.

ಯಾತ್ರೆ ಪ್ರಾರಂಭಿಸುವ ಮೊದಲೊಂದು ತಪಾಸಣಾ ಕೇಂದ್ರವಿದೆ. ಅಲ್ಲಿ ತುಂಬಾ ಜನ ಸಂದಣಿಯಿತ್ತು. ಅಲ್ಲಿ ನಾನು ಮತ್ತು ನನ್ನ ಡೋಲಿಯ ಜನ ಅಕಸ್ಮಾತ್ ಬೇರ್ಪಟ್ಟರೆ, ಒಬ್ಬರಿಗೊಬ್ಬರು ಸಿಗುವಂತಿರಲಿಲ್ಲ. ಅಷ್ಟು ಜನ! ಇಬ್ಬರು ಪಾಲ್‌ಕಿ ಹೊತ್ತು ಮುಂದೆ ಹೋದರೆ, ಇನ್ನಿಬ್ಬರು ನನ್ನ ಭುಜ ಹಿಡಿದು ತಪಾಸಣಾ ಕೇಂದ್ರದ ಬಳಿ ಕರೆದೊಯ್ದರು. ಅವರು ನನ್ನನ್ನು ಹಿಡಿದುಕೊಳ್ಳದಿದ್ದರೆ, ನನಗೆ ಅವರ ಗುರುತು ಸಿಗುತ್ತಲೇ ಇರಲಿಲ್ಲ! ನನಗೆ ಅಲ್ಲಿ ಎಲ್ಲರೂ ಒಂದೇ ತರಹ ಕಾಣುತ್ತಿದ್ದರು! ಅಂತೂ ತಪಾಸಣಾ ಕೇಂದ್ರದಿಂದ ಆಚೆಗೆ ಬಂದ ನಂತರ, ಅವರು ನನ್ನನ್ನು ಡೋಲಿಯಲ್ಲಿ ಕೂರಿಸಿಕೊಂಡರು. ದಾರಿಯಲ್ಲಿ ಹೋಗುವಾಗ ಉದ್ದಕ್ಕೂ ಅಲ್ಲಲ್ಲಿ ನಮಗೆ ಚಿಕ್ಕ ಚಿಕ್ಕ ತಿಂಡಿ ಪೊಟ್ಟಣಗಳನ್ನು, ಜ್ಯೂಸ್ ಪ್ಯಾಕೇಟುಗಳನ್ನು ಉಚಿತವಾಗಿ ಕೊಡುತ್ತಿದ್ದರು. ಯಾತ್ರಾರ್ಥಿಗಳ ಬಗ್ಗೆ ಅವರುಗಳಿಗಿದ್ದ ಪ್ರೀತಿ ಗೌರವಗಳನ್ನು ಕಂಡು ನನಗೆ ಆಶ್ಚರ್ಯ ಮತ್ತು ಖುಷಿ ಅನ್ನಿಸಿತ್ತು. ಅವರ ಸೇವಾಭಾವಕ್ಕೆ ತಲೆಬಾಗಿದ್ದೆ. ಡೋಣಿ ಹುಡುಗರು ತಮ್ಮ ಹೆಗಲ ಮೇಲೆ ದಪ್ಪನೆಯ ಕಂಬಳಿ ಹೊದ್ದು ಅದರ ಮೇಲೆ ಕುರ್ಚಿಗೆ ಕಟ್ಟಿದ್ದ ಬೊಂಬನ್ನು ಇಟ್ಟುಕೊಂಡು ಸಾಗುತ್ತಿದ್ದರು. ಒಂದಷ್ಟು ದೂರ ಹೋದ ನಂತರ ಕಂಬಳಿಯೊಂದಿಗೆ ಹೆಗಲನ್ನು ಬದಲಿಸುತಿದ್ದರು. ನನ್ನ ಭಾರವನ್ನು ಅವರ ಮೇಲೆ ಹಾಕಿದ್ದಕ್ಕೆ ಸಂಕೋಚ ಅನ್ನಿಸಿದರೂ ಅನ್ಯ ಮಾರ್ಗವಿರಲಿಲ್ಲ. ಅವರು ಮುಸಲ್ಮಾನರಾಗಿದ್ದು ಅವರ ಹರಿದ ಕೋಟು, ಹರಿದ ಬೂಟನ್ನು ನೋಡಿದರೆ ಬಹಳ ಬಡವರಿರಬೇಕು ಅನ್ನಿಸುತ್ತಿತ್ತು.

ದಾರಿಯಲ್ಲಿ ಹೋಗುವಾಗ ಪರ್ವತಗಳ ಸೊಬಗನ್ನು ನೋಡುತ್ತಿದ್ದೆ. ಅಲ್ಲಲ್ಲಿ ನಡುವೆ ಹಿಮ ಹೆಪ್ಪುಗಟ್ಟಿತ್ತು. ಸೂರ್ಯನ ಕಿರಣ ಅದರ ಮೇಲೆ ಬಿದ್ದಾಗ ಅದು ಬೆಳ್ಳಿಯ ಬೆಟ್ಟವೇನೋ ಅನ್ನಿಸುವಂತಿತ್ತು. ಅಲ್ಲಿನ ಮರಗಳು, ಹೂಗಿಡಗಳು, ಅಲ್ಲಲ್ಲಿ ಹರಿಯುತ್ತಿದ್ದ ನೀರಿನ ಝುರಿಗಳು ಮನಸ್ಸಿಗೆ ಮುದ ನೀಡುತ್ತಿದ್ದವು. ದಾರಿಯಲ್ಲಿ ಹೋಗುವಾಗ ಅಲ್ಲೊಂದು ಬಂಡೆಯಲ್ಲಿ ಕಾಳಿಯ ಮೂರ್ತಿಯಿತ್ತು. ನನ್ನೊಂದಿಗಿದ್ದ ಹುಡುಗರು ಅದನ್ನು ತೋರಿಸಿದರು. ಹಾಗೇ ಭಕ್ತಿಯಿಂದ ಕೈ ಮುಗಿದು ಮುಂದೆ ಹೊರಟೆ.

ಅಮರನಾಥನ ಗುಹೆ ಇನ್ನೂ ಒಂದು ಕಿ.ಮೀ. ದೂರವಿದೆ ಎನ್ನುವಾಗಲೇ ನಮ್ಮ ಡೋಲಿಯ ಪ್ರಯಾಣ ಮುಗಿದಿದ್ದು ನಂತರ ನಡೆದು ಹೋಗಬೇಕು. ಅಲ್ಲಿಯೇ ನನ್ನ ಬೂಟನ್ನು ಕಳಚಿಟ್ಟು ಹೊರಟೆ. ನನ್ನೊಂದಿಗೆ ಇಬ್ಬರು ಹುಡುಗರು ಬಂದರು, ಡೋಲಿಯ ಬಳಿ ಇಬ್ಬರು ಉಳಿದುಕೊಂಡರು. ನೂರಾರು ಮೆಟ್ಟಿಲುಗಳನ್ನು ಹತ್ತಬೇಕು. ಡೋಲಿಯಲ್ಲಿ ಹೋಗಿದ್ದರೂ ನನಗೆ ದಣಿವಾಗಿತ್ತು. ನನ್ನ ಭುಜ ಹಿಡಿದು ಒತ್ತಾಸೆಯಾಗಿ ಆ ಡೋಣಿ ಹುಡುಗರೇ ಒಂದೊಂದೇ ಮೆಟ್ಟಿಲನ್ನು ಹತ್ತಿಸುತ್ತಾ ಕರೆದುಕೊಂಡು ಹೋದರು. ದಣಿದ ದೇಹವನ್ನು ಹೊತ್ತು, ಸೋತ ಕಾಲನ್ನು ಸವರುತ್ತಾ ಒಂದೊಂದು ಮೆಟ್ಟಿಲನ್ನು ಏರುವಾಗಲೂ ಮನಸ್ಸು ಮಾತ್ರ ಶಿವನ ದರ್ಶನಕ್ಕಾಗಿ ಮಿಡಿಯುತ್ತಿತ್ತು.

ರಭಸದಿಂದ ಹರಿದು ಬರುತ್ತಿರುವ ಅಮರ ಗಂಗೆಯ ಓಂಕಾರ ಝೇಂಕಾರದೊಂದಿಗೆ ದೇವಾಲಯದ ಘಂಟಾನಾದವೂ ಸೇರಿ ಶಿವನ ಇರುವಿಕೆ ಹತ್ತಿರವಾಯಿತೆಂದು ಸಾರುತಿತ್ತು. ಶುಭ್ರ ಶ್ವೇತ ವರ್ಣದ ಶಿವಲಿಂಗ ಸುಮಾರು ಆರು ಅಡಿ ಎತ್ತರವಾಗಿದ್ದು ಸ್ವಲ್ಪ

ದೂರದಿಂದಲೇ ಕಂಡು ಬರುವುದು. ಹತ್ತಿರ ಹೋದಾಗ ಶಿವನ ಬಲಗಡೆಗೆ ಪಾರ್ವತಿ ಮತ್ತು ಗಣೇಶನ ಹಿಮದ ಪ್ರತೀಕಗಳಿವೆ. ಭಕ್ತಿಯಿಂದ ಕೈ ಮುಗಿದು ನಿಂತೆ. ದೇಹಕ್ಕೆ ಆಯಾಸವಾಗಿದ್ದರೂ ಮನಸ್ಸಿಗೆ ಉಲ್ಲಾಸವಾಗಿತ್ತು. ಹಿಮಾಲಯ ನೋಡಬೇಕೆನ್ನುವ ನನ್ನ ಕನಸು ಈಡೇರಿತ್ತು.

ನಾನು ತಲೆಬಾಗಿ ಶಿವನಿಗೆ ನಮಸ್ಕರಿಸುತ್ತಿರುವಾಗ ಜನರೆಲ್ಲಾ ಜೋರಾಗಿ ಕೂಗುವುದು ಕೇಳಿಸಿತು. ಏನೆಂದು ಕಣ್ಣು ಬಿಟ್ಟು ನೋಡಿದರೆ, ಅಲ್ಲಿ ಎರಡು ಪಾರಿವಾಳಗಳು ಕಂಡು ಬಂದಿದ್ದವು. ಅದನ್ನು ನೋಡಿದ ಜನರು ಹರ್ಷೋದ್ಗಾರ ಮಾಡಿದ್ದರು. ನನಗೂ ಅವುಗಳನ್ನು ನೋಡಿ ಖುಷಿಯಾಗಿತ್ತು. ಅಮರನಾಥದ ಭೇಟಿ ಸಾರ್ಥಕವೆನ್ನಿಸಿತ್ತು.

ನನ್ನನ್ನು ಕರೆದುಕೊಂಡು ಹೋಗಿ ಹಿಮಲಿಂಗ ದರ್ಶನ ಮಾಡಿಸಿದ ಹುಡುಗರನ್ನು ಆ ಮಹಾದೇವನೇ ಕರುಣೆಯಿಂದ ನನ್ನೆಡೆಗೆ ಕಳುಹಿಸಿದ ತನ್ನ ಗಣಗಳವರೇನೋ ಅನ್ನಿಸಿಬಿಟ್ಟಿತ್ತು. ನನೊಂದಿಗಿದ್ದ ಅವರು ''ಮಾಜೀ, ದರ್ಶನ್ ಕರ್‌ಕೇ ಆಪ್‌ಕೋ ಖುಷೀ ಮಿಲಿ ಕ್ಯಾ? ಆಪ್‌ಕೋ ಕೈಸಾ ಲಗಾ?'' ಎಂದು ಪ್ರೀತಿಯಿಂದ ಕೇಳಿದರು. ನಾನು ಸಂತೋಷದಿಂದ ಹೌದೆಂಬಂತೆ ಗೋಣಾಡಿಸಿದೆ. ದರ್ಶನದ ನಂತರ ಡೋಲಿಯ ಹತ್ತಿರ ಬಂದೆವು. ನೆನಪಿಗಿರಲಿ ಎಂದು ಅವರೊಂದಿಗೆ ನಾನು ಫೋಟೋ ತೆಗೆಸಿಕೊಂಡೆ. ದಾರಿಯಲ್ಲಿ ಬರುವಾಗ ಒಂದು ಲಂಗರಿನ ಬಳಿ ಬಂದು ಊಟ ಮಾಡಿದೆವು. ಅಲ್ಲಿ ಯಾತ್ರಾರ್ಥಿಗಳಿಗೆ ಮಾತ್ರ ಉಚಿತವಂತೆ. ನನ್ನೊಂದಿಗೆ ಇದ್ದ ಹುಡುಗರು ಹಣ ಕೊಟ್ಟೇ ತಿನ್ನಬೇಕಾಗಿತ್ತು. ನಾನೇ ಖುಷಿಯಿಂದ ಅವರಿಗೆ ಊಟ ಕೊಡಿಸಿದೆ.

ನಂತರ ನಮ್ಮ ಟೆಂಟ್ ಬಳಿ ಬಂದು ಅಂದೇ ರಾತ್ರಿ ನಮ್ಮ ಮುಂದಿನ ಪ್ರಯಾಣವಾದ ಶ್ರೀನಗರಕ್ಕೆ ಹೊರಟೆವು. ಅಂತೂ ನನ್ನ ಅಮರನಾಥ ಯಾತ್ರೆಯು ಜೀವನ ಪೂರ್ತಿ ನೆನಪಿನಲ್ಲಿ ಉಳಿಯುವಂಥದ್ದು. ನನ್ನನ್ನು ಡೋಲಿಯಲ್ಲಿ ಕರೆದೊಯ್ದ ಆ ಹುಡುಗರನ್ನು ಸದಾ ಕೃತಜ್ಞತೆಯಿಂದ ನೆನೆಯುತ್ತಿರುತ್ತೇನೆ. ಕುರ್ಚಿಯಲ್ಲಿ ಕೂತು ಹೋದ ನನಗೇ ಅಷ್ಟು ಆಯಾಸವಾಗಿರಬೇಕಾದರೆ ಅವರ ಮೇಲೆ ನನ್ನ ಭಾರ ಹಾಕಿದ್ದರಿಂದ ಅವರಿಗೆಷ್ಟು ಶ್ರಮವಾಗಿರಬೇಕೆಂದು ನೆನೆದುಕೊಳ್ಳುತ್ತಿರುತ್ತೇನೆ. ನಮ್ಮಂತಹವರನ್ನು ಕರೆದೊಯ್ಯುವುದು ಅವರ ಕಸುಬಾಗಿರಬಹುದು. ಆದರೂ ಅದು ತುಂಬಾ ಕಷ್ಟಕರವಾದದ್ದು.

ಇನ್ನೊಮ್ಮೆ ಅಮರನಾಥಕ್ಕೆ ಹೋಗಬೇಕೆನ್ನಿಸುತ್ತಿದೆ. ಮತ್ತೆ ಹೋದರೆ ಅದೆಷ್ಟು ಕಷ್ಟವಾದರೂ ಸರಿ, ಪಹಲ್ಗಾಮ್‌ನಿಂದ ನಡೆದೇ ಹೋಗಬೇಕೆನ್ನಿಸಿದೆ. ಹಿಮಾಲಯದ ಆ ಸೌಂದರ್ಯ, ಆ ತಣ್ಣನೆಯ ಅನುಭವ ನಿಜಕ್ಕೂ ಖುಷಿ ಅನ್ನಿಸುತ್ತದೆ. ಅಂತೂ ಜೀವನದಲ್ಲಿ ಒಮ್ಮೆಯಾದರೂ ಈ ಅಮರನಾಥ ಗುಹೆಯನ್ನು ನೋಡಲೇಬೇಕು. ಅದನ್ನು ನೋಡಿದಾಗ ಆಗುವ ಆ ಭಾವವನ್ನು ಹೇಗೆ ಹೇಳುವುದು! ನೋಡಿಯೇ ಅನುಭವಿಸಬೇಕು! ✽


with Best Compliments from

# Technopolymers Pvt. Ltd.,



B-185, 2nd Stage, Industrial Estate, Peenya
Bangalore - 560 058 Tel : 28360264
e-mail : technopolymers.pvtltd@gmail.com



**Contact for your requirements of:**



Vacuum Processed Epoxy Resin,
Cast Insulators and Bushings,
DMC & SMC Mouldings
Fiberglass Reinforced Plastic Mouldings,
FRP Tanks & Linings, Fiberglass Tubes & Rods
Thermoplastic & Thermoset
Industrial Plastic Mouldings

